# ಡಾ. ರಾಜಕುಮಾರ್ ಅವರ ಕನ್ನಡ ನಾಡು-ನುಡಿ ಸೇವೆ

**ಹುಲುಗಪ್ಪ ಎನ್. ಎಚ್.**
ಸಂಶೋಧನಾರ್ಥಿ, ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**Received: 12-03-2024 ; Acepted: 10-05-2024 ; Published: 08-06-2024**

**DOI: https://doi.org/10.5281/zenodo.11525959**

## ABSTRACT:

'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಗಾದೆ ಮಾತಿಗೆ ಡಾ. ರಾಜಕುಮಾರ್ ಅವರು ಸೂಕ್ತ ನಿದರ್ಶನವಾಗಿದ್ದಾರೆ. ಕನ್ನಡ ನಾಡು ಕಂಡ ಉಜ್ವಲ ಕನ್ನಡ ಪ್ರೇಮಿಗಳಲ್ಲಿ ಡಾ. ರಾಜಕುಮಾರ್ ಅವರು ಅಗ್ರಗಣ್ಯರಾಗಿ ನಿಲ್ಲುತ್ತಾರೆ. ಇವರು ಕನ್ನಡ ನಾಡು-ನುಡಿ, ಸಂಸ್ಕೃತಿ ಮೊದಲಾದವುಗಳಿಗೆ ತಮ್ಮ ವಿಶಿಷ್ಟ ವ್ಯಕ್ತಿತ್ವ, ಪ್ರತಿಭೆ ಹಾಗೂ ಐತಿಹಾಸಿಕ ಪಾತ್ರಗಳ ಮೂಲಕ ಸುವರ್ಣ ಅಂಚನ್ನು ಹೊದಿಸಿದ್ದಾರೆ. ರಾಜಕುಮಾರ್ ರವರು ಕೇವಲ ಶ್ರೇಷ್ಠ ನಟರಾಗಿರದೆ, ಕನ್ನಡ ನಾಡಿನ ಅಘೋಷಿತ ಸಾಂಸ್ಕೃತಿಕ ರಾಯಭಾರಿಯಾಗಿದ್ದು, ನೆಲ, ಜಲ, ಭಾಷೆಗೆ ಜನದನಿಯಾಗಿ ನಿಂತವರು. ಕನ್ನಡ ನಾಡು ಹಾಗೂ ಹೊರ ರಾಜ್ಯಗಳಲ್ಲಿನ ಹಲವಾರು ಸಾಮಾಜಿಕ ಅವಘಡಗಳು ನಡೆದಾಗ ರಾಜಕುಮಾರ್ ರವರು ಪಾದಯಾತ್ರೆ ಮಾಡಿ ನಿಧಿ ಸಂಗ್ರಹಿಸಿದರು.

ರಾಜಕುಮಾರ್ ರವರು ಸರ್ಕಾರಿ ನೌಕರರಿಗೆ ಕಡ್ಡಾಯ ಕನ್ನಡ ಮಾಡಬೇಕೆಂದು ಹೋರಾಟ ಮಾಡಿ ಅದು ಕಾರ್ಯರೂಪಕ್ಕೆ ಬರುವಲ್ಲಿ ಪ್ರಮುಖ ಪಾತ್ರವಹಿಸಿದರು. ಹಾಗೆಯೇ ಕಾವೇರಿ ನದಿಯ ಜಲವಿವಾದದ ಹೋರಾಟದಲ್ಲಿ ರಾಜಕುಮಾರ್ ರವರು ತೊಡಗಿಕೊಂಡಿದ್ದು ಕನ್ನಡಿಗರಿಗೆ ಹೊಸ ಹುರುಪನ್ನು ತುಂಬಿದಂತಾಯಿತು. ಮತ್ತೆ ಬೆಂಗಳೂರು ದೂರದರ್ಶನ ಕೇಂದ್ರದಿಂದ ಉರ್ದು ಭಾಷೆಯಲ್ಲಿ ಪ್ರಸಾರವಾಗುತ್ತಿದ್ದ ವಾರ್ತೆಗಳನ್ನು ನಿಲ್ಲಿಸುವಲ್ಲಿ ಬಹುಮುಖ್ಯರಾಗಿದ್ದಾರೆ.

ರಾಜಕುಮಾರ್ ರವರು ಚಿತ್ರರಂಗ ಕ್ಷೇತ್ರದಲ್ಲಿ 50 ವರ್ಷಗಳ ಕಾಲ ನಟರಾಗಿ ಜನಮನದಲ್ಲಿ ನೆಲೆಸಿದ್ದಾರೆ. ಚಿತ್ರರಂಗದಲ್ಲಿ ವಿವಿಧ ಪಾತ್ರಗಳಲ್ಲಿ ನಟಿಸುವುದರ ಮೂಲಕ ನಾಡಿನ ಸಂಸ್ಕೃತಿ ಉಳಿಸುವಲ್ಲಿ ಪ್ರಮುಖರಾಗಿದ್ದಾರೆ. ಇವರಿಗೆ ಪರಭಾಷೆಗಳಿಂದ ಬಹಳಷ್ಟು ಅವಕಾಶಗಳು ಬಂದರೂ ತನ್ನ ತಾಯಿ ನುಡಿಯನ್ನು ನೆಚ್ಚಿಕೊಂಡು ಬದುಕಿದವರು. ಇವರು ಕೇವಲ ಚಲನಚಿತ್ರಗಳಲ್ಲಿ ನಟಿಸುವುದು

ಮಾತ್ರವಲ್ಲದೆ ತಾನು ಮತ್ತು ಬೇರೆಯವರು ಅಭಿನಯಿಸಿದ ಎಷ್ಟೋ ಚಲನಚಿತ್ರಗಳಿಗೆ ಹಾಡುಗಳನ್ನು ಹಾಡಿದ್ದಾರೆ. ತಾವು ಅಭಿನಯಿಸಿದ ಪಾತ್ರಗಳ ಮೂಲಕ ಕನ್ನಡ ನಾಡು-ನುಡಿಯ ಪ್ರಜ್ಞೆಯನ್ನು ತುಂಬಿದ್ದಾರೆ. ರಾಜಕುಮಾರ್ ರವರಿಗೆ ರಾಜಕೀಯ ಅವಕಾಶಗಳು ಸಾಕಷ್ಟಿದ್ದರೂ ಕೇವಲ ಒಬ್ಬ ನಟನಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ರಾಯಭಾರಿಯಂತೆ ಕೊನೆಯವರೆಗೂ ಉಳಿದದ್ದು ಅಚ್ಚರಿಯೆನಿಸುತ್ತದೆ. ಆದ್ದರಿಂದಾಗಿಯೇ ಕನ್ನಡ ನಾಡು, ಕನ್ನಡ ಜನತೆ ತನ್ನಿಂದ ತಾನೇ ರಾಜಕುಮಾರ್ ಅವರನ್ನು ಕನ್ನಡ ಭಾಷೆ ಮತ್ತು ಸಾಂಸ್ಕೃತಿಕ ಪರಂಪರೆಗೆ ಸಂಕೇತವಾಗಿ ಒಪ್ಪಿಕೊಂಡಿದ್ದಾರೆ ಎಂಬುದರಲ್ಲಿ ಅನುಮಾನವಿಲ್ಲ.

80ರ ದಶಕದಲ್ಲಿ ನಡೆದ ಗೋಕಾಕ್ ಚಳುವಳಿಯಲ್ಲಿ ದೊಡ್ಡ ದೊಡ್ಡ ಕವಿಗಳು ಕೈ ಜೋಡಿಸಲು ಹಿಂದೇಟಾಕಿದರು. ಆದರೆ ರಾಜಕುಮಾರ್ ರವರು 'ಕನ್ನಡ ನಾಡು-ನುಡಿಗಾಗಿ ಯಾವ ತ್ಯಾಗಕ್ಕೂ ಸಿದ್ಧ, ಕನ್ನಡಕ್ಕೆ ಕುತ್ತು ಬಂದಿತೆಂದರೆ ಯಾವುದಕ್ಕೂ ಹಿಂದೆ ಸರಿಯುವುದಿಲ್ಲ' ವೆಂಬಂತೆ ಚಳುವಳಿಯಲ್ಲಿ ಕೈ ಜೋಡಿಸಿದ್ದು ಕನ್ನಡ ಪ್ರೇಮಿಗಳಲ್ಲಿ ಒಂದು ರೀತಿಯಲ್ಲಿ ಆನೆ ಬಲವೇ ಬಂದಂತಾಯಿತು.

ರಾಜಕುಮಾರ್ ರವರು ಸಾಮಾನ್ಯರ ಆಶೋತ್ತರಗಳಿಗಾಗಿ, ರೈತರಿಗಾಗಿ, ನಾಡು-ನುಡಿಗಾಗಿ ಟೊಂಕಕಟ್ಟಿ ನಿಂತವರು. ಕನ್ನಡ ಭಾಷೆಯನ್ನು ಅಚ್ಚ ಸೊಗಡಿನಿಂದ, ಸ್ವಚ್ಚವಾಗಿ, ಸ್ಪುಟವಾಗಿ, ಸುಂದರವಾಗಿ ಮಾತನಾಡುವ ಮತ್ತೊಬ್ಬ ನಟ ಸಿಗುವುದು ವಿರಳ ಎಂದೇ ಹೇಳಬೇಕು. ಅದ್ದರಿಂದಾಗಿಯೇ ಕನ್ನಡದ ಅಣ್ಣನ ಸ್ಥಾನ ಇಂದಿಗೂ ಎಂದಿಗೂ ಅವರಿಗೇನೇ ಮೀಸಲಾಗಿದೆ.

**KEYWORDS:**

ರಾಜಕುಮಾರ್, ಕನ್ನಡ, ಕರ್ನಾಟಕ, ನಾಡು-ನುಡಿ, ಸಾಂಸ್ಕೃತಿಕ ರಾಯಭಾರಿ, ಕನ್ನಡ ಚಲನಚಿತ್ರ.

ಹಸಿರು ವನಗಳ ನಾಡು, ಬೆಟ್ಟಗುಡ್ಡಗಳ ಬೀಡು, ಶ್ರೀಗಂಧ, ತೇಗ, ಹೊನ್ನೆ, ತೆಂಗು ಮೊದಲಾದ ವೃಕ್ಷಗಳಿಗೆ ಸಿರಿವಂತನಾಡು, ಕೃಷ್ಣೆ, ಕಾವೇರಿ ಹರಿಯುವ ಅದ್ವಿತೀಯ, ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆ ಹೊಂದಿರುವ ನಾಡು, ಸಂಪದ್ಭರಿತ ಜನಪದ ನಾಡು, ಆಶ್ರಯಿಸಿ ಬಂದವರಿಗೆ ನೆಲೆಯ ಬೀಡು ಈ ನಮ್ಮ ಚೆಲುವ ಕನ್ನಡ ನಾಡು. ಇಂತಹ ನಮ್ಮ ಕನ್ನಡ ನಾಡು-ನುಡಿಗೆ ಸರಿಸುಮಾರು ಎರಡು ಸಾವಿರದ ಮೂರು ನೂರು ವರ್ಷಗಳ ಇತಿಹಾಸವಿದೆ. ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಸಂಗೀತಕ್ಕೆ ಶ್ರೀಮಂತ ಪರಂಪರೆ ಇದೆ. ಕವಿರಾಜಮಾರ್ಗಕಾರನಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿ

ಪಡೆದ ಉತ್ಕೃಷ್ಟ ಸಾಹಿತಿಗಳವರೆಗೆ ಈ ನಾಡು-ನುಡಿಯ ಸೊಬಗನ್ನು ಮುಕ್ತ ಕಂಠದಿಂದ ಬಣ್ಣಿಸುತ್ತ ಬಂದಿದ್ದಾರೆ. ಈ ನೆಲೆಯಲ್ಲಿ ಕೇವಲ ಕವಿಗಳು, ದಾರ್ಶನಿಕರಷ್ಟೇ ಅಲ್ಲದೇ ಅನೇಕ ಕಲಾವಿದರೂ ಸಹಿತ ಕನ್ನಡ ನಾಡು-ನುಡಿ ಸೇವೆಗಾಗಿ ತಮ್ಮನ್ನು ತೊಡಗಿಸಿಕೊಂಡು ಬಂದಿದ್ದಾರೆ. ಅಂತವರಲ್ಲಿ ಬಹುಮುಖ್ಯರಾದವರು ಜನರಿಂದ ಪ್ರೀತಿಯಿಂದ 'ಅಣ್ಣಾವ್ರು' ಎಂದೇ ಬಿಂಬಿತರಾಗಿರುವ ಕನ್ನಡದ ಕಣ್ಮಣಿ ಡಾ. ರಾಜಕುಮಾರ್ ಒಬ್ಬರು ಎಂಬುದು ನಿರ್ವಿವಾದ.

'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಗಾದೆ ಮಾತಿಗೆ ಡಾ. ರಾಜಕುಮಾರ್ ಅವರ ವ್ಯಕ್ತಿತ್ವ ಸೂಕ್ತ ನಿದರ್ಶನವಾಗಿದೆ. ಕರ್ನಾಟಕ ಕಂಡ ಉಜ್ವಲ ಕನ್ನಡ ಪ್ರೇಮಿಗಳಲ್ಲಿ ಅಗ್ರಗಣ್ಯರಾಗಿ ನಿಲ್ಲುತ್ತಾರೆ. ಇವರು ಕೊನೆಯವರೆಗೂ ಕನ್ನಡಿಗರ ಆರಾಧ್ಯ ದೈವ, ಈ ನಾಡಿನ ಜೀವಾಳವಾಗಿಯೇ ಬದುಕಿದವರು. ಕನ್ನಡ ನಾಡು-ನುಡಿ, ಸಂಸ್ಕೃತಿಯ ಮೊದಲಾದವುಗಳಿಗೆ ತಮ್ಮ ವಿಶಿಷ್ಟ ವ್ಯಕ್ತಿತ್ವ, ಪ್ರತಿಭೆ ಹಾಗೂ ಐತಿಹಾಸಿಕ ಪಾತ್ರಗಳ ಮೂಲಕ ಸುವರ್ಣ ಅಂಚನ್ನು ಹೊಂದಿಸಿದ್ದಾರೆ. ಯಾವುದೇ ದೃಷ್ಟಿಯಿಂದ ನೋಡಿದರೂ ಡಾ. ರಾಜಕುಮಾರ್ ಕನ್ನಡ ಸಂಸ್ಕೃತಿ ವಕ್ತಾರರಾಗಿ ಕಾಣುತ್ತಾರೆ. ಅವರೊಬ್ಬ ಶ್ರೇಷ್ಟ ನಟರಷ್ಟೇ ಆಗಿರದೆ, ಈ ನಾಡಿನ ಅಘೋಷಿತ ಸಾಂಸ್ಕೃತಿಕ ರಾಯಭಾರಿಯಾಗಿದ್ದರು. ಪರಭಾಷೆಗಳಾದ ಹಿಂದಿ, ತಮಿಳು, ತೆಲುಗು ಚಿತ್ರರಂಗಗಳಿಂದ ಅದ್ಭುತ ಅವಕಾಶಗಳು ಬಂದರೂ ಅದರ ಕಡೆ ತಿರುಗಿಯೂ ನೋಡದೆ ತಮ್ಮ ಕಡೆಯ ತನಕ ಕನ್ನಡ ನಾಡೇ ತನ್ನ ಕಾರ್ಯಕ್ಷೇತ್ರ, ಕನ್ನಡ ಭಾಷೆಯೇ ತನ್ನ ಉಸಿರು ಎಂದು ಬದುಕಿದವರು. ನೆಲ, ಜಲ, ಭಾಷೆ ಹಾಗೂ ನಾಡಿನ ಸಂಸ್ಕೃತಿಯ ಪ್ರಶ್ನೆ ಬಂದಾಗಲೆಲ್ಲ ಜನದನಿಯಾಗಿ, ಜನರ ಆಶೋತ್ತರದ ಪ್ರತೀಕವಾಗಿ ಹೋರಾಟಕ್ಕೆ ಧುಮುಕುವ ಮೂಲಕ ನಾಡಿನ ಕಾವಲು ಭಟನಾಗಿ ನಾಡನ್ನು ಕಟ್ಟಿದವರು, ಸಂಸ್ಕೃತಿ, ಭಾಷೆಯನ್ನು ಉಳಿಸಿ, ಬೆಳೆಸಿದವರು.

ಭೂಕಂಪ, ಸುನಾಮಿ, ಕ್ಷಾಮ, ನೆರೆಯಾವಳಿ ಇಂತಹ ಯಾವುದೇ ಸಾಮಾಜಿಕ ಅವಘಡಗಳು ಸಂಭವಿಸಿದಾಗಲೆಲ್ಲ ಬೀದಿಗಿಳಿದು ಪಾದಯಾತ್ರೆ ಮಾಡಿ ನಿಧಿ ಸಂಗ್ರಹಿಸುವ ಪರಂಪರೆಯನ್ನು ಹುಟ್ಟು ಹಾಕಿದವರು. "1961ರಲ್ಲಿ ಇಡೀ ರಾಜ್ಯ ಭೀಕರ ಬರಗಾಲಕ್ಕೆ ಒಳಗಾಗಿ ಜನ ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದರು. ಈ ಸಂದರ್ಭದಲ್ಲಿ 'ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್'

ಪತ್ರಿಕಾ ಬಳಗವು ಚಲನಚಿತ್ರ ಕಲಾವಿದರನ್ನು ಒಗ್ಗೂಡಿಸಿ ಪರಿಹಾರ ನಿಧಿ ಸಂಗ್ರಹ ಯಾತ್ರೆಯನ್ನು ಆಯೋಜಿಸಿತು."[1] ಈ ಯಾತ್ರೆಯ ನೇತೃತ್ವವನ್ನು ರಾಜಕುಮಾರ್ ಅವರು ವಹಿಸಿಕೊಂಡಿದ್ದರು. ಅನಾರೋಗ್ಯದಿಂದ ಬಳಲುತ್ತಿದ್ದರೂ ತನ್ನ ಕಲಾವಿದರ ಬಳಗವನ್ನು ಕಟ್ಟಿಕೊಂಡು ರಸಮಂಜರಿ ಕಾರ್ಯಕ್ರಮಗಳನ್ನು ನಡೆಸಿ ಪರಿಹಾರ ನಿಧಿಯನ್ನು ಸಂಗ್ರಹಿಸಿದರು. ಮುಂದುವರಿದು ಕಾರ್ಗಿಲ್ ಯುದ್ಧದ ಸಂತ್ರಸ್ಥರ ಪರಿಹಾರ ನಿಧಿಗಾಗಿ ಆಯೋಜಿಸಿದ್ದ ರಸಮಂಜರಿ ಕಾರ್ಯಕ್ರಮವನ್ನು ಡಾ. ರಾಜಕುಮಾರ್ ನೇತೃತ್ವ ವಹಿಸಿಕೊಂಡು ನಡೆಸಿಕೊಟ್ಟರು. ಹಾಗೆಯೇ ಓರಿಸ್ಸಾದಲ್ಲಿನ ಚಂಡಮಾರುತ, ಗುಜರಾತಿನಲ್ಲಿ ಸಂಭವಿಸಿದ ದುರಂತ, ಉಡುಪಿಯಲ್ಲಿ ಸಂಭವಿಸಿದ ಪ್ರವಾಹ ಮೊದಲಾದ ಇಂತಹ ಅನಾಹುತಗಳಿಗೆ ಬೀದಿಗಿಳಿದು ಪರಿಹಾರ ನಿಧಿಯನ್ನು ಸಂಗ್ರಹಿಸಿದರು.

ಕರ್ನಾಟಕ ರಾಜ್ಯ ಸರ್ಕಾರದ 'ಸಿ' ಮತ್ತು 'ಡಿ' ದರ್ಜೆಯ ನೌಕರರ ನೇಮಕಾತಿಗೆ ಕನ್ನಡ ಪರೀಕ್ಷೆ ಕಡ್ಡಾಯ ಮಾಡಬೇಕು ಎಂಬುದರ ವಿಚಾರವಾಗಿ ಡಾ. ರಾಜಕುಮಾರ್ ಅವರು "1984ರ ಜನವರಿ 25ರಂದು ಅಶೋಕ ಹೋಟೆಲ್‌ನಲ್ಲಿ ಪತ್ರಿಕಾಗೋಷ್ಠಿ ನಡೆಸಿದರು. ಡಾ. ರಾಜಕುಮಾರ್ ಅವರ ತಮ್ಮ ವೃತ್ತಿ ಜೀವನದಲ್ಲಿ ನಡೆಸಿದ ಪ್ರಪ್ರಥಮ ಪತ್ರಿಕಾಗೋಷ್ಠಿಯದು"[2] ಈ ಗೋಷ್ಠಿಯಲ್ಲಿ ಸರ್ಕಾರಿ ನೌಕರರಿಗೆ ಕನ್ನಡ ಕಡ್ಡಾಯ ಮಾಡಬೇಕೆಂಬುದು ಡಾ. ರಾಜಕುಮಾರ್ ಅವರ ಹೋರಾಟದ ನಿಲುವಾಗಿತ್ತು. ಇದರ ಪರಿಣಾಮವಾಗಿ ಡಾ. ರಾಜಕುಮಾರ್ ಅಭಿಮಾನಿ ಸಂಘದ ವತಿಯಿಂದ ಬೆಂಗಳೂರು ಬಂದ್, ಸತ್ಯಾಗ್ರಹ ಮತ್ತು ಮೌನ ಮೆರವಣಿಗೆಗಳು ನಡೆದಿದ್ದವು. ಇದರ ಮುಖ್ಯ ಉದ್ದೇಶ ಆರ್ಥಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ಎಲ್ಲಾ ರಂಗಗಳ ಪ್ರಗತಿಗೆ ಕನ್ನಡ ಭಾಷೆ ಅಡಿಗಲ್ಲಾಗಬೇಕು ಎಂದು ಇದರ ಪರವಾಗಿ ಹೋರಾಟ ಮಾಡಿದರು.

ಕಾವೇರಿ ನದಿಯ ಜಲವಿವಾದ ಇಂದು ನಿನ್ನೆಯದಲ್ಲ. ಒಂದು ಕಡೆ ಕೇಶಿರಾಜ ತನ್ನ ಶಬ್ದಮಣಿದರ್ಪಣದಲ್ಲಿ "ಕಾವೇರಿಯ ಕಾಲನಾ ತಿಗುಳನೇಂ ಕಡಗೊಂಡನೊ ಬಡ್ಡಿಗೊಂಡನೋ"[3] ಎಂಬ ಉಕ್ತಿಯನ್ನು ನೋಡಿದಾಗ ಹದಿಮೂರನೇ ಶತಮಾನದಲ್ಲಿಯೇ ಕನ್ನಡಿಗರಿಗೂ, ತಮಿಳರಿಗೂ ಕಾವೇರಿ ನದಿ ನೀರಿನ ಹಂಚಿಕೆಯ ವಿವಾದವಿದ್ದಿತು ಎಂಬುದಕ್ಕೆ ಸಾಕ್ಷಿಯಾಗುತ್ತದೆ. ಆದರೆ ಈ ವಿವಾದ ಕಳೆದ ಒಂದು ಶತಮಾನದಿಂದ ಹೆಚ್ಚು ಕಾವೇರಿರುವುದು

ಸ್ಪಷ್ಟವಾಗುತ್ತದೆ. ಇಂತಹ ಶತಶತಮಾನಗಳ ಚರಿತ್ರೆಯಿರುವ ಈ ವಿವಾದದಲ್ಲಿ ರಾಜಕುಮಾರ್‌ರವರು ತಮ್ಮನ್ನು ತೊಡಗಿಸಿಕೊಂಡದ್ದು, ಕನ್ನಡಿಗರಿಗೆ ಒಂದು ರೀತಿಯ ಹೊಸ ಹುರುಪನ್ನು ತುಂಬಿದಂತಾಯಿತು. “1992ರಲ್ಲಿ ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ 23ನೆಯ ಅಂತರಾಷ್ಟ್ರೀಯ ಚಲನಚಿತ್ರೋತ್ಸವವನ್ನು ರದ್ದುಗೊಳಿಸಿ ನೊಂದ ಕನ್ನಡಿಗರ ಪರವಾಗಿ ಕಾವೇರಿ ಜಲವಿವಾದದಲ್ಲಿ ಭಾಗಿಯಾಗುವ ಮೂಲಕ ತಮ್ಮ ಕನ್ನಡ ಪರವಾದ ನಿಲುವನ್ನು ಎತ್ತಿಹಿಡಿದರು.”[4]

“ಬೆಂಗಳೂರು ದೂರದರ್ಶನ ಕೇಂದ್ರವು 1994 ಅಕ್ಟೋಬರ್ 2ರಂದು ಪ್ರತಿ ರಾತ್ರಿ 7. 45ಕ್ಕೆ ಉರ್ದು ಭಾಷೆಯಲ್ಲಿ ವಾರ್ತೆ ಪ್ರಸಾರ ಮಾಡಲು ಆರಂಭಿಸಿತು.”[5] ಈ ಪ್ರಸಾರದ ವಿರುದ್ಧ ಕಲಾವಿದರು, ಸಾಹಿತಿಗಳ ಮನವಿಗೆ ರಾಜಕುಮಾರ್ ಅವರು ಒಪ್ಪಿಗೆ ಸೂಚಿಸಿ, ಅದರಂತೆ ಯಾವುದೇ ಕಾರಣಕ್ಕೂ ಬೆಂಗಳೂರು ದೂರದರ್ಶನದಿಂದ ಉರ್ದು ವಾರ್ತೆಯನ್ನು ಪ್ರಸಾರ ಮಾಡಬಾರದು ಎಂದು ಹೋರಾಡಿ ಉರ್ದು ವಾರ್ತೆಯನ್ನು ನಿಲ್ಲಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿದರು.

**ಚಿತ್ರರಂಗದ ಮೂಲಕ ನಾಡು-ನುಡಿ ಸೇವೆ:**

ಡಾ. ರಾಜಕುಮಾರ್ ಅವರು ಚಿತ್ರರಂಗ ಕ್ಷೇತ್ರದಲ್ಲಿನ ಐವತ್ತು ವರ್ಷಗಳಲ್ಲಿ ನಟರಾಗಿ ಜನಮನದಲ್ಲಿ ಉಳಿದರೆಂಬುದು ಅಕ್ಷರಶಃ ಸತ್ಯ. ಹಾಗೆಯೇ ಕನ್ನಡ ಭಾಷೆಯ ಸಾಂಕೇತಿಕ ರೂಪವಾಗಿಯೂ ಉಳಿದರೆಂಬುದು ಕೂಡ ಅಷ್ಟೇ ಸತ್ಯ. ಭಾಷೆಯ ಅಭಿಮಾನಿಯಾಗಿ ಇಡೀ ನಾಡಿನ ಜನತೆಗೆ ಒಂದು ರೀತಿಯಲ್ಲಿ ಆದರ್ಶವಾಗಿ ಉಳಿದರು. ಮುಂದುವರಿದು ಚಿತ್ರರಂಗದಲ್ಲಿ ವಿವಿಧ ಪಾತ್ರಗಳಲ್ಲಿ ನಟಿಸುವುದರ ಮೂಲಕ ನಾಡು-ನುಡಿಗೆ ಅಪಾರ ಸೇವೆ ಮಾಡಿದ್ದಾರೆ. ತೆಲುಗಿನಲ್ಲಿ ಎನ್.ಟಿ.ಆರ್., ನಾಗೇಶ್ವರರಾವ್, ತಮಿಳಿಗೆ ಎಂ.ಜಿ.ಆರ್., ಬಂಗಾಳಕ್ಕೆ ಉತ್ತಮಕುಮಾರ ಇರುವಂತೆ ಕನ್ನಡ ಎಂದಾಗ ಡಾ. ರಾಜಕುಮಾರ್ ಎಂದು ಹೇಳಲಾಗುತ್ತಿದೆ. ಆದರೆ ಎಂ.ಜಿ.ಆರ್., ಎನ್.ಟಿ.ಆರ್.ರಂತೆ ರಾಜಕೀಯದಲ್ಲಿ ಸೇರಿ ಮಂತ್ರಿಗಳಾಗಿ ಅಧಿಕಾರದ ಬಗ್ಗೆ ಆಸಕ್ತಿ ವಹಿಸದೆ, ಕೇವಲ ಒಬ್ಬ ನಟನಾಗಿ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ವ್ಯಾಪಿಸಿದ ರೀತಿ ಒಂದು ರೀತಿಯಲ್ಲಿ ಅಚ್ಚರಿಯೆನಿಸುತ್ತದೆ. ಇದೆಲ್ಲವೂ ಅವರ ಚಿತ್ರಗಳಿಂದ ಮತ್ತು ಅವರ ವ್ಯಕ್ತಿತ್ವದಿಂದ ಬಂದದ್ದು.

ಕನ್ನಡ ನಾಡು, ಕನ್ನಡ ಜನತೆ ತನ್ನಿಂದ ತಾನೇ ರಾಜಕುಮಾರ್ ಅವರನ್ನು ಕನ್ನಡ ಭಾಷೆ, ಸಾಂಸ್ಕೃತಿಕ ಪರಂಪರೆಗೆ ಸಂಕೇತವನ್ನಾಗಿ ಒಪ್ಪಿಕೊಂಡಿದೆ. ಆದ್ದರಿಂದಲೇ ರಣಧೀರಕಂಠೀರವ, ಮಯೂರ, ಚಂದ್ರವಳ್ಳಿಯ ತೋಟ, ಭಕ್ತ ಕನಕದಾಸ, ಭಕ್ತ ಕುಂಬಾರ, ಕೃಷ್ಣದೇವರಾಯ, ಸನಾದಿ ಅಪ್ಪಣ್ಣ , ಬಂಗಾರದ ಮನುಷ್ಯ, ಬೇಡರ ಕಣ್ಣಪ್ಪ , ಬಭ್ರುವಾಹನ, ಭಕ್ತಪ್ರಹ್ಲಾದ, ಹೀಗೆ ನೂರಾರು ಚಿತ್ರಗಳು ಜನರಲ್ಲಿ ಈ ಬಗೆಯ ಭಾವನೆಯನ್ನು ಬೆಳೆಸಿದವು.

ಕನ್ನಡ ಭಾಷೆಯ ಅಚ್ಚ ಸೊಗಡನ್ನು ರಾಜಕುಮಾರ್ ಅವರ ಬಾಯಿಯಿಂದಲೇ ಕೇಳಬೇಕು. ಬಹುಶಃ ಅವರಷ್ಟು ಸ್ವಚ್ಛವಾಗಿ, ಸ್ಫುಟವಾಗಿ, ಸುಂದರವಾಗಿ ಕನ್ನಡವನ್ನು ಮಾತನಾಡುವ ಮತ್ತೊಬ್ಬ ನಟ ಸಿಗುವುದು ವಿರಳ ಎಂದೇ ಹೇಳಬೇಕು. ಒಂದು ರೀತಿಯಲ್ಲಿ ಭಾಷೆಯ ಚೆಲವು, ಸತ್ವ , ಗತ್ತಿನ ಉಚ್ಚಾರಣೆ, ಪ್ರೀತಿ ಸಾಮೂಹಿಕವಾಗಿ ವೃದ್ಧಿಸಿದೆ. “ಒಬ್ಬ ನಟನ ಮೇಲಿನ ಪ್ರೀತಿ, ಚಿತ್ರಗಳ ಪ್ರೀತಿ, ಅವನ ಭಾಷಾ ಪ್ರೀತಿ, ಪರ್ಯಾಯವಾಗಿ ಅದೊಂದು ಆದರ್ಶವಾಗಿ, ಪರಂಪರೆಯಾಗಿ, ಅನುಕರಣೆಯಾಗಿ ಬೆಳೆಯುತ್ತಿದೆ. ಡಾ. ರಾಜಕುಮಾರ್ ಅವರಿಂದ ಕನ್ನಡ ಉಳಿದಿದೆ, ಬೆಳೆದಿದೆ. ಕನ್ನಡದ ಮೇಲಿನ ಪ್ರೀತಿ ಹೆಚ್ಚಿದೆ.”[6] ರಾಜಕುಮಾರ್ ಅವರು ಕನ್ನಡ ನಾಡು-ನುಡಿಯ ಬಗ್ಗೆ ಇಟ್ಟುಕೊಂಡ ಅಭಿಮಾನ ಅವರ ಚಲನಚಿತ್ರಗಳಲ್ಲಿನ ಭಾಷೆಯ ಉಚ್ಚಾರದಿಂದಲೇ ತಿಳಿಯುತ್ತದೆ.

ರಾಜಕುಮಾರ್ ಅವರನ್ನು ಕನ್ನಡ ನಾಡಿನ ಜನತೆ ಜಾತಿ, ಧರ್ಮ, ಪಂಗಡ, ಪ್ರಾಂತ್ಯ, ಭಾಷೆ ಇವೆಲ್ಲವನ್ನು ಮೀರಿ ಪ್ರೀತಿಸುತ್ತ ಬಂದಿದ್ದಾರೆ. ಹಿಂದಿ, ತೆಲುಗು, ತಮಿಳು, ಮಲೆಯಾಳಂ ಚಲನಚಿತ್ರಗಳನ್ನು ನೋಡುತ್ತಿದ್ದ ಪ್ರೇಕ್ಷಕರನ್ನು ಕನ್ನಡ ಸಿನಿಮಾ ನೋಡುವಂತೆ ಬದಲಾಯಿಸಿದರು. ರಾಜಕುಮಾರ್ ಅವರ ಚಲನಚಿತ್ರಗಳು ಕನ್ನಡಿಗರಲ್ಲಿ ಜಾಗೃತಿ ಮೂಡಿಸಿದವು. ಒಂದು ರೀತಿಯಲ್ಲಿ ಭಾಷೆಗೆ ಸಂಬಂಧಿಸಿದಂತೆ ಬಂದ ಚಿತ್ರಗಳಲ್ಲಿ ಕನ್ನಡ ಭಾಷೆಯ ಅಭಿಮಾನ ಮೇಳೈಸಿತು. “ರಾಜಕುಮಾರ್ ಅವರ ಎರಡು ಪ್ರಮುಖ ಆಯ್ಕೆಗಳು ಅವರು ರಾಜಕುಮಾರ್ ಆಗಿ ಬೆಳೆಯಲು ಮುಖ್ಯ ಕಾರಣ. ಒಂದು ಕನ್ನಡ ಚಿತ್ರ ಬಿಟ್ಟು ಬೇರೆ ಯಾವ ಭಾಷೆಗೂ ಹೋಗುವುದಿಲ್ಲ ಎಂಬ ನಿರ್ಧಾರ. ಇನ್ನೊಂದು ರಾಜಕೀಯಕ್ಕೆ ಹೋಗದಿರುವ ನಿರ್ಧಾರ.”[7] ಎಂದು ರಾಜಕುಮಾರ್ ಅವರ ಈ ರೀತಿಯ

ಬೆಳವಣಿಗೆಗೆ ಕಾರಣಗಳನ್ನು ಗುರುತಿಸಲಾಗಿದೆ.

ಕರ್ನಾಟಕದ ಗಡಿಯಾಚೆಗೂ ರಾಜಕುಮಾರ್ ರವರ ಚಿತ್ರಗಳ ಪ್ರಭಾವ ಬೀರಿರುವುದನ್ನು ನೋಡಬಹುದು. ಇವರ ಚಿತ್ರಗಳು ಪರಭಾಷೆಗಳಿಗೆ ಡಬ್ ಆಗಿವೆ. ಬೇಡರ ಕಣ್ಣಪ್ಪ , ದಶಾವತಾರ, ಮಹಿಷಾಶುರ ಮರ್ಧಿನಿ ಮೊದಲಾದ ಚಿತ್ರಗಳು ಹೊರ ರಾಜ್ಯಗಳಲ್ಲಿ ಶತ ದಿನದ ಸಂಭ್ರಮಗಳನ್ನು ಕಂಡಿವೆ. ಇವರ ಚಿತ್ರಗಳು ಇತರೆ ರಾಜ್ಯಗಳಲ್ಲಿ ಪ್ರದರ್ಶನ ಕಂಡಿರುವುದಕ್ಕೆಅವರ ಭಾಷೆಯ ಪ್ರಭಾವವೇ ಬಹುಮುಖ್ಯ ಕಾರಣವಾಗಿವೆ. ಮುಂದುವರಿದು ಆ ಕಾಲದಲ್ಲಿಯೇ "ಅಮೇರಿಕಾದಲ್ಲಿ ಸಂಗೀತ ರಸಸಂಜೆ ನಡೆಸಿದ ಮೊಟ್ಟಮೊದಲ ಭಾರತೀಯ ಚಿತ್ರರಂಗದ ಕಲಾವಿದರು ಡಾ. ರಾಜಕುಮಾರ್ ಅವರೇ ಆಗಿದ್ದರು. ಅದು ನಮ್ಮ ಕನ್ನಡ ಭಾಷೆಯಲ್ಲೇ ವಿದೇಶದಲ್ಲೂ ಭಾಷಾಭಿಮಾನ ಮೆರೆದವರು."[8] ಹಾಗೆಯೇ ಮುಂಬೈ, ದೆಹಲಿ ನಗರಗಳಲ್ಲಿ ಕನ್ನಡ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಸಿದರು. ಒಂದು ರೀತಿಯಲ್ಲಿ ದೇಶ ವಿದೇಶದವರೆಗೂ ಪ್ರತ್ಯಕ್ಷ, ಪರೋಕ್ಷವಾಗಿ ತಮ್ಮಿಂದ ತಮ್ಮ ಚಿತ್ರಗಳಿಂದ ಭಾಷಾಭಿಮಾನವನ್ನು ಮೆರೆದಿದ್ದಾರೆ. "ಕನ್ನಡದ ಆಧುನಿಕ ಜನಪದ ಸಾಂಸ್ಕೃತಿಕ ಲೋಕದಲ್ಲಿ ಪದೇ ಪದೇ ಹೆಚ್ಚು ನೆನಪಾಗುವುದು, ಚರ್ಚೆಗೆ ಬರುವ, ಆಡು ನುಡಿಗಳಿಗೆ ಒಳಗಾಗುವ ಎರಡು ಐಕಾನ್‌ಗಳೆಂದರೆ ಕುವೆಂಪು ಹಾಗೂ ರಾಜಕುಮಾರ್"[9] ಎಂದು ಹೇಳಲಾಗುತ್ತಿದೆ.

ಡಾ. ರಾಜಕುಮಾರ್ ಅವರು ಕನ್ನಡ ಹಾಡುಗಳನ್ನು ಮಧುರ ಕಂಠದಿಂದ ಹಾಡುವ ಗಾಯಕರಾಗಿದ್ದರು. ಅವರ ಕಂಠದಿಂದ ಬಂದ ಪ್ರಸಿದ್ಧವಾದ ಹಾಡು 'ಹುಟ್ಟಿದರೆ ಕನ್ನಡ ನಾಡಲ್ ಹುಟ್ಟಬೇಕು'. ಇವರ ವಿಶೇಷತೆಯೆಂದರೆ ಬೇರೆಯವರ ನಟನೆಯ ಚಲನಚಿತ್ರಗಳಿಗೂ ತುಂಬಾ ಪ್ರೀತಿಯಿಂದ ಗಾಯಕರಾಗಿ ಹಾಡುತ್ತಿದ್ದರು. ಇವರ ಅಭಿನಯಕ್ಕೆ ಮಾತ್ರ ಪ್ರಶಸ್ತಿಗಳು ಬರದೆ, ಗಾಯನಕ್ಕೂ ರಾಜ್ಯ, ರಾಷ್ಟ್ರ ಪ್ರಶಸ್ತಿಗಳು ಸಂಧಿವೆ. "1992ರಲ್ಲಿ 'ಜೀವನಚೈತ್ರ' ಚಿತ್ರದಲ್ಲಿ ಹಾಡಿದ 'ನಾದಮಯ ಈ ಲೋಕವೆಲ್ಲ' ಗೀತೆಗೆ ಕೇಂದ್ರ ಸರ್ಕಾರದ ಶ್ರೇಷ್ಠ ಗಾಯಕ ಪ್ರಶಸ್ತಿ ಬಂದಿದೆ. 'ಆಕಸ್ಮಿಕ' ಚಿತ್ರದ 'ಹುಟ್ಟಿದರೆ ಕನ್ನಡ ನಾಡಲ್ ಹುಟ್ಟಬೇಕು' ಗೀತೆಗೆ ರಾಜ್ಯ ಪ್ರಶಸ್ತಿ ಬಂದಿದೆ."[10] ಹೀಗೆ ಇವರ ಗಾಯನ ಪ್ರತಿಭೆ ಚಲನಚಿತ್ರಗಳಿಗೆ ಮಾತ್ರ ಸೀಮಿತವಾಗದೆ, ಕನ್ನಡ ಕವಿಗಳ ಭಾವಗೀತೆಗಳು, ದಾಸರ ಪದಗಳನ್ನು

ಹಾಡುವ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೂ ಕೊಡುಗೆ ನೀಡಿದವರಾಗಿದ್ದಾರೆ.

ಒಂದು ನಾಡನ್ನು ಸಾಂಸ್ಕೃತಿಕವಾಗಿ ಕಟ್ಟುವುದು ಸುಲಭದ ಮಾತಲ್ಲ. ಆದರೆ ರಾಜಕುಮಾರ್ ಅವರು ತಾವು ನಟಿಸಿದ ಚಲನಚಿತ್ರಗಳ ಮೂಲಕ, ಹಾಡುಗಳ ಮೂಲಕ ಒಂದು ನಾಡನ್ನು ಸಾಂಸ್ಕೃತಿಕವಾಗಿ ಕಟ್ಟಲು ಎಂತಹ ಮೌಲ್ಯಗಳು ಬೇಕೋ ಅಂತಹ ಮೌಲ್ಯಗಳನ್ನು ತಮ್ಮ ಚಿತ್ರಗಳ ಮೂಲಕ ನಾಡಿನ ಜನತೆಯಲ್ಲಿ ತುಂಬಿದ್ದಾರೆ. ಐತಿಹಾಸಿಕ ಚಿತ್ರಗಳಲ್ಲಿ ನಟಿಸುವ ಮೂಲಕ ಜನಸಾಮಾನ್ಯರಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ತುಂಬಿದ್ದಾರೆ. ಅಷ್ಟೇ ಅಲ್ಲದೇ ತಮ್ಮ ಪಾತ್ರಗಳ ಮೂಲಕ ಕನ್ನಡ ನಾಡು-ನುಡಿಯ ಪ್ರಜ್ಞೆಯನ್ನು ಕನ್ನಡ ಮೌಲ್ಯಗಳನ್ನು ಪ್ರತಿಬಿಂಬಿಸುತ್ತಾ ಕನ್ನಡ ಜನತೆಗೆ ತುಂಬಾ ಹತ್ತಿರವಾಗಿ ಅವರ ಮನದಲ್ಲಿ ನಾಡು-ನುಡಿ ಪ್ರೇಮವನ್ನು ಬಿತ್ತಿ ಬೆಳೆಸಿದ ಧೀಮಂತ ನಾಯಕರಾಗಿದ್ದಾರೆ.

**ಗೋಕಾಕ್ ಚಳುವಳಿಯ ಮೂಲಕ ನಾಡು-ನುಡಿ ಸೇವೆ:**

ಎಂಬತ್ತರ ದಶಕದಲ್ಲಿ ನಡೆದ ಗೋಕಾಕ್ ಚಳುವಳಿ ಕನ್ನಡ ಜಾಗೃತಿಯ ದೃಷ್ಟಿಯಿಂದ ಅತ್ಯಂತ ಮಹತ್ತರವಾದುದು. ಇಡೀ ಕನ್ನಡಿಗರೆಲ್ಲ ಒಂದಾಗಿ ಹೋರಾಡಿದ ಚಳವಳಿಯೆಂದೇ ಹೇಳಬೇಕು. ಇಂತಹ ಮಹತ್ವದ ಚಳುವಳಿಯಲ್ಲಿ ಡಾ. ರಾಜಕುಮಾರ್ ಅವರ ಪಾತ್ರ ಅಮೋಘವಾದುದು. "1982ರ ಎಪ್ರೀಲ್ 2 ಗೋಕಾಕ್ ಚಳುವಳಿಯ ನೇತಾರರಲ್ಲಿ ಒಬ್ಬರಾದ ಹಿರಿಯ ಸಾಹಿತಿ ಶಂಭಾ ಜೋಶಿ ನೇತೃತ್ವದಲ್ಲಿ 'ಜೈಲು ಭರೋ' ಚಳುವಳಿ ಆರಂಭವಾಗಿತ್ತು. ಕುವೆಂಪು, ಮಾಸ್ತಿ, ಕಾರಂತ ಮುಂತಾದವರನ್ನು ಚಳುವಳಿಯಲ್ಲಿ ಕೈ ಜೋಡಿಸುವಂತೆ ಕರೆ ನೀಡಿದೆವು. ಅದಕ್ಕೆ ಅವರು ಒಪ್ಪಲಿಲ್ಲ. ಆ ಹೊತ್ತಿನಲ್ಲಿ ರಾಜಕುಮಾರ್ ಮದ್ರಾಸಿನಲ್ಲಿದ್ದರು. ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಪತ್ರಿಕೆಗಳ ಮೂಲಕ ಅವರನ್ನು ಮನವಿ ಮಾಡಿಕೊಂಡೆವು. ಅವರ ಸಕರಾತ್ಮಕ ಹೇಳಿಕೆ ಮರುದಿನವೇ ಪ್ರಕಟವಾಯಿತು. 'ಕನ್ನಡ ನಾಡು-ನುಡಿಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧ, ಕನ್ನಡಕ್ಕೆ ಕುತ್ತು ಬಂದಾಗ ಎಲ್ಲವನ್ನೂ ತೊರೆದು ಬರಲು ಸಿದ್ಧ, ಯಾವುದೇ ರೀತಿಯ ಹೋರಾಟಕ್ಕೂ ಹಿಂದೆ ಸರಿಯುವುದಿಲ್ಲ! ಎಂದು ಮದ್ರಾಸ್‌ನಿಂದಲೇ ಸ್ಪಷ್ಟಪಡಿಸಿದ್ದರು. ಆ ಕ್ಷಣದಿಂದಲೇ ಚಳುವಳಿಯ ಭಾಗವಾಗಿಬಿಟ್ಟರು"[11] ಎಂದು ಆಗಿನ ಕ್ರಿಯಾ ಸಮಿತಿಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಚಂದ್ರಶೇಖರ ಪಾಟೀಲ ಅವರು ಗೋಕಾಕ್ ಚಳುವಳಿಯಲ್ಲಿ

ಡಾ. ರಾಜಕುಮಾರ್ ಅವರ ಪಾತ್ರವನ್ನು ಗೌರವದಿಂದ ಸ್ಮರಿಸಿಕೊಂಡಿದ್ದಾರೆ.

ಗೋಕಾಕ್ ಚಳುವಳಿಯಲ್ಲಿ ದುಮುಕಿದ ಡಾ. ರಾಜಕುಮಾರ್ ಅವರ ಬಾಯಿಂದ ಹರಿದುಬಂದ 'ಮಾತೃಭಾಷೆಗಾಗಿ ನನ್ನ ಪ್ರಾಣ ಹೋದರೂ ಚಿಂತೆ ಇಲ್ಲ. ಕನ್ನಡ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ಜಾರಿಗೊಳಿಸುತ್ತೇವೆ. ಎಷ್ಟೇ ಅಡೆತಡೆಗಳು ಬಂದರು ಅವೆಲ್ಲವನ್ನು ಮೆಟ್ಟಿ ನಿಲ್ಲುತ್ತೇವೆ' ಎಂಬ ಕೆಚ್ಚೆದೆಯ ಮಾತುಗಳು ಕನ್ನಡಿಗರಿಗೆ ಒಂದು ರೀತಿಯ ಹೊಸ ಹುರುಪನ್ನೇ ಕೊಟ್ಟಂತಾಯಿತು ಎಂದು ಹೇಳಬೇಕು. ಚಂಪ ಅವರ ಅಭಿಪ್ರಾಯದಂತೆ ಗೋಕಾಕ್ ಚಳುವಳಿಗೆ ರಾಜಕುಮಾರ್ ಅವರ ಆಗಮನವು ಸಾವಿರ ಆನೆಗಳ ಬಲವನ್ನು ತಂದುಕೊಟ್ಟಿದೆ ಎಂಬುದು ಅಕ್ಷರಶಃ ಸತ್ಯವಾದುದು. ಅಂದಿನ ಸಂದರ್ಭದಲ್ಲಿ ಮಹಾನ್ ನಾಯಕರ ದಂಡೆ ಇತ್ತು. ಅವರನ್ನೆಲ್ಲ ಆಹ್ವಾನಿಸಬಹುದಾಗಿತ್ತು. ಆದರೆ ಅವರನ್ನೆಲ್ಲ ಹೊರತುಪಡಿಸಿ, ನಾಡಿನ ಪ್ರಮುಖ ಸಾಹಿತಿ ದಿಗ್ಗಜರೆಲ್ಲ ಡಾ. ರಾಜಕುಮಾರ್ ಅವರನ್ನು ಆಹ್ವಾನಿಸಿದ್ದು, ಒಂದು ರೀತಿಯ ರಾಜಕುಮಾರ್ ಅವರಲ್ಲಿನ ಅಭಿಮಾನಿಗಳ ಶಕ್ತಿಯನ್ನು ತೋರಿಸುತ್ತದೆ.

ಗೋಕಾಕ್ ಚಳುವಳಿಯಲ್ಲಿ ತಮ್ಮನ್ನು ಕೂಡಾ ಅದರ ಭಾಗವನ್ನಾಗಿ ಮಾಡಿಕೊಂಡ ರಾಜಕುಮಾರ್ ಅವರ ನೇತೃತ್ವದಲ್ಲಿ ಬೆಳಗಾವಿಯಿಂದ ಮೈಸೂರಿನವರೆಗೆ ಚಿತ್ರಕಲಾವಿದರ ಜಾಥಾ ಸಂಚರಿಸಿತು. ಮುಂದುವರಿದು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಸೇರಿದ್ದ ಭಾರೀ ಜನಸ್ತೋಮದೆದುರು ರಾಜಕುಮಾರ್ ಅವರು ಮಾತನಾಡುತ್ತ "ಹೆತ್ತ ತಾಯಿಯ ನಂತರ ಎರಡನೆಯ ತಾಯಿ ನಮ್ಮ ಕನ್ನಡ ತಾಯಿ. ಈ ನಮ್ಮ ತಾಯಿಯನ್ನು ರಕ್ಷಿಸದಿದ್ದರೆ ನಾವೆಂಥ ಕನ್ನಡಿಗರು? ನಮ್ಮ ಮಾತೃಭಾಷೆಗೆ ಪ್ರಥಮ ಸ್ಥಾನ ಈ ರಾಜ್ಯದಲ್ಲಿ ಇರಬೇಕೆಂದು ಕೇಳುವ ಹಕ್ಕು ಎಲ್ಲ ಕನ್ನಡಿಗರಿಗೆ ಇದೆ"[12] ಎಂದು ಹೇಳಿರುವುದು ಒಂದು ರೀತಿಯಲ್ಲಿ ಜನರಲ್ಲಿ ಇದ್ದ ಕನ್ನಡದ ಅಭಿಮಾನ ಇಮ್ಮಡಿಗೊಂಡಿತೆಂದು ಹೇಳಬೇಕು. ಅವರು ಚಳುವಳಿಯ ಸಂದರ್ಭದಲ್ಲಿ ಮೈಕ್ ಹಿಡಿದು ಹಾಡುತ್ತಿದ್ದ 'ನಾನಿರುವುದೇ ನಿಮಗಾಗಿ, ನಾಡಿರುವುದೇ ನಮಗಾಗಿ, ಕಣ್ಣೀರೇಕೆ, ಬಿಸಿಯುಸಿರೇಕೆ, ಬಾಳುವಿರೆಲ್ಲ ಹಾಯಾಗಿ!' ಎಂಬ ಹಾಡು ಎಲ್ಲರ ನರನಾಡಿಗಳಲ್ಲಿ ಹೋರಾಟದ ಹೊಸ ಹುರುಪನ್ನು ತುಂಬುತ್ತಿತ್ತು.

ಕನ್ನಡ ನಾಡಿನಲ್ಲಿ ರಾಜಕುಮಾರ್ ಅವರ ಅಭಿಮಾನಿ ಬಳಗ

ಅಪಾರವಾದುದು. "ವಿದ್ಯಾರ್ಥಿ ದೆಸೆಯ ಕಾಲದಿಂದಲೂ, ಹಿಂದಿನ ಐವತ್ತು ವರ್ಷಗಳಿಂದ ನಾನು ಸಾರ್ವಜನಿಕರೊಂದಿಗೆ ಬೆಳೆದಿದ್ದೇನೆ. ಕಾಂಗ್ರೇಸ್ಸಿನೊಂದಿಗೆ ಬೆಳೆದುಬಂದ ನಾನು ಮುಂದಾಳುಗಳ ದರ್ಶನಕ್ಕೆ ನೆರೆಯುತ್ತಿದ್ದ ಜನಸಂದಣಿಯನ್ನು ನೋಡಿದ್ದೇನೆ. ಜವಾಹರಲಾಲ್ ನೆಹರೂ ಕರ್ನಾಟಕದಲ್ಲಿ ಸಂಚರಿಸಿದ ಕಾಲಕ್ಕೆ ಅವರನ್ನು ಜನರು ಮುತ್ತುತ್ತಿದ್ದುದ್ದನ್ನು ನಾನು ಕಂಡಿದ್ದೇನೆ. ಆಗ ನಾನು ಕಂಡ ಜನಸಂದಣಿಗೂ, ಡಾ. ರಾಜಕುಮಾರ್‌ರವನ್ನು ನೋಡಲು ಸೇರಿದ್ದ ಜನಸಂದಣಿ ಖಂಡಿತವಾಗಿ ದೊಡ್ಡದೆಂದು ನಿಸ್ಸಂದೇಹವಾಗಿ ಹೇಳಬಹುದು."[13] ಈ ಚಳುವಳಿಯ ಯಾತ್ರೆಯ ಜಾಥಾದುದ್ದಕ್ಕೂ ರಾಜಕುಮಾರ್ ರವರು ನಗೆಯಲ್ಲಿ, ಹಾಸ್ಯದಲ್ಲಿ ಜನರನ್ನು ಮುಳುಗಿಸಿ, ಜಾಥಾದಲ್ಲಿ ಸೇರಿದ್ದ ಜನರಿಗೆ ಆಯಾಸವನ್ನು ದೂರ ಮಾಡುತ್ತಿದ್ದರು. ಬಹುಶಃ ರಾಜಕುಮಾರ್ ಅವರು ಗೋಕಾಕ್ ಚಳುವಳಿಯಲ್ಲಿ ಭಾಗವಹಿಸಿ ಚಳುವಳಿಯ ನೇತೃತ್ವ ವಹಿಸದಿದ್ದರೆ ಕನ್ನಡ ಭಾಷೆ ಮೂರನೇ ಸ್ಥಾನದಲ್ಲಿಯೇ ಇರಬೇಕಾಗಿತ್ತು. ಅಷ್ಟರ ಮಟ್ಟಿಗೆ ರಾಜಕುಮಾರ್ ಅವರು ತಮ್ಮ ಶಕ್ತಿಯನ್ನು ಗೋಕಾಕ್ ಚಳವಳಿಯಲ್ಲಿ ತೋರಿಸಿದ್ದಾರೆ.

ರಾಜಕುಮಾರ್ ಎಂದರೆ ಕನ್ನಡ, ಕನ್ನಡವೆಂದರೆ ರಾಜಕುಮಾರ್. ತಮ್ಮ ಕೊನೆಯವರೆಗೂ ಕನ್ನಡವೇ ಉಸಿರು, ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎಂದು ಬದುಕಿದವರು. ಕನ್ನಡ ನಾಡಿಗೆ, ಕನ್ನಡ ಭಾಷೆಗೆ ಅನ್ಯಾಯವಾದಾಗಲೆಲ್ಲ ಅದರ ವಿರುದ್ಧ ಧ್ವನಿ ಎತ್ತುತ್ತಿದ್ದವರು. ಕನ್ನಡ ಭಾಷಾ ಚಳುವಳಿಗೆ ಒಂದು ಸ್ಪಷ್ಟ ರೂಪ ಕೊಟ್ಟ ಮಹಾನ್ ಚೇತನ ಡಾ. ರಾಜಕುಮಾರ್. ಒಬ್ಬ ಕಲಾವಿದರಾಗಿ ನಾಡು-ನುಡಿಗಾಗಿ ಏನು ಕೊಡುಗೆಯನ್ನು ನೀಡಬೇಕಿತ್ತೋ ಅದಕ್ಕಿಂತಲೂ ನೂರು ಪಟ್ಟು ಹೆಚ್ಚಿನ ಕೊಡುಗೆಯನ್ನು ಕೊಟ್ಟು ಹೋಗಿದ್ದಾರೆ. ಕನ್ನಡ ಚಿತ್ರರಂಗದ ಸಮಸ್ಯೆ ಇರಬಹುದು, ಕನ್ನಡ ನಾಡು-ನುಡಿಯ ಸಮಸ್ಯೆ ಇರಬಹುದು. ನಾಡಿನ ಸಾಮಾಜಿಕ ಸಮಸ್ಯೆಗಳಿರಬಹುದು, ಅಂತಹ ಸಮಸ್ಯೆಗಳಿಗೆ ಅವರದೆ ಆದ ರೀತಿಯಲ್ಲಿ ಪ್ರತಿಭಟಿಸಿ ಉತ್ತರವನ್ನು ಕಂಡುಕೊಂಡು, ಕನ್ನಡಿಗರ ಹೃದಯದಲ್ಲಿ ಅರಳಿದ ಕಮಲದ ಹೂವಾಗಿ ಚಿರಕಾಲ ನೆಲೆಯೂರಿದ್ದಾರೆ.

ಅಪ್ರತಿಮ ಕಲಾವಿದ ಮತ್ತು ಸಾಂಸ್ಕೃತಿಕ ನಾಯಕ ಎಂದೇ ಪ್ರಖ್ಯಾತರಾಗಿರುವ ರಾಜಕುಮಾರ್ ಅವರು ಅಂದು, ಇಂದು ಎಂದು

ನಮ್ಮೊಳಗೆ ಉಳಿಯುವ ಕನ್ನಡ ನಾಡು-ನುಡಿ ಮತ್ತು ನಟನೆಯ ಅಭಿಮಾನದ ನಾಯಕರಾಗಿದ್ದಾರೆ. ಈ ಕಾರಣದಿಂದಲೇ ಕನ್ನಡದ ಅಣ್ಣನ ಸ್ಥಾನ ಇಂದಿಗೂ ಎಂದಿಗೂ ಅವರಿಗೆ ಮೀಸಲಾಗಿದೆ. ಹಳ್ಳಿಯ ಸಾಮಾನ್ಯ ಹುಡುಗ ಮುತ್ತುರಾಜ ಇಡೀ ಕನ್ನಡಿಗರ ಅಣ್ಣನಾಗಿ ಬೆಳೆದು ನಿಲ್ಲಬೇಕೆಂದರೆ ಒಂದು ರೀತಿಯ ಊಹೆಗೂ ನಿಲುಕದ ಪ್ರಶ್ನೆಯು ಹೌದು, ಉತ್ತರವೂ ಹೌದು.

## ಕೊನೆಯ ಟಿಪ್ಪಣಿ:


1. ಮಮತ ಎಚ್. ಆರ್. (2021). ಕಾದಂಬರಿ ಆಧಾರಿತ ಡಾ. ರಾಜಕುಮಾರ್ ಚಲನಚಿತ್ರಗಳು. ಮೈಸೂರು ವಿಶ್ವವಿದ್ಯಾಲಯ. ಮೈಸೂರು. ಪು. ಸಂ. 78
2. ಮಮತ ಎಚ್. ಆರ್. (2021). ಕಾದಂಬರಿ ಆಧಾರಿತ ಡಾ. ರಾಜಕುಮಾರ್ ಚಲನಚಿತ್ರಗಳು. ಮೈಸೂರು ವಿಶ್ವವಿದ್ಯಾಲಯ. ಮೈಸೂರು. ಪು. ಸಂ. 82
3. ಪೂಜಾರ ವಿ. ಜಿ. (1982). ಶಬ್ದಮಣಿದರ್ಪಣ ಸಂಗ್ರಹ. ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ. ಗುಲಬರ್ಗಾ. ಪು. ಸಂ. 155
4. ಮಮತ ಎಚ್. ಆರ್. (2021). ಕಾದಂಬರಿ ಆಧಾರಿತ ಡಾ. ರಾಜಕುಮಾರ್ ಚಲನಚಿತ್ರಗಳು. ಮೈಸೂರು ವಿಶ್ವವಿದ್ಯಾಲಯ. ಮೈಸೂರು. ಪು. ಸಂ. 80
5. ಮಮತ ಎಚ್. ಆರ್. (2021). ಕಾದಂಬರಿ ಆಧಾರಿತ ಡಾ. ರಾಜಕುಮಾರ್ ಚಲನಚಿತ್ರಗಳು. ಮೈಸೂರು ವಿಶ್ವವಿದ್ಯಾಲಯ. ಮೈಸೂರು. ಪು. ಸಂ. 84
6. ರಮೇಶ ಎನ್. ತೇವರಿ. (2013). ಕನ್ನಡ ನಾಡು-ನುಡಿಗೆ ಡಾ. ರಾಜಕುಮಾರ್ ಅವರ ಕೊಡುಗೆ. ರಾಣಿಚನ್ನಮ್ಮ ವಿಶ್ವವಿದ್ಯಾಲಯ. ಬೆಳಗಾವಿ. ಪು. ಸಂ. 179
7. ರಮೇಶ ಎನ್. ತೇವರಿ. (2013). ಕನ್ನಡ ನಾಡು-ನುಡಿಗೆ ಡಾ. ರಾಜಕುಮಾರ್ ಅವರ ಕೊಡುಗೆ. ರಾಣಿಚನ್ನಮ್ಮ ವಿಶ್ವವಿದ್ಯಾಲಯ. ಬೆಳಗಾವಿ. ಪು. ಸಂ. 182
8. ರಮೇಶ ಎನ್. ತೇವರಿ. (2013). ಕನ್ನಡ ನಾಡು-ನುಡಿಗೆ ಡಾ. ರಾಜಕುಮಾರ್ ಅವರ ಕೊಡುಗೆ. ರಾಣಿಚನ್ನಮ್ಮ ವಿಶ್ವವಿದ್ಯಾಲಯ. ಬೆಳಗಾವಿ. ಪು. ಸಂ. 184
9. ಮಮತ ಎಚ್. ಆರ್. (2021). ಕಾದಂಬರಿ ಆಧಾರಿತ ಡಾ. ರಾಜಕುಮಾರ್ ಚಲನಚಿತ್ರಗಳು. ಮೈಸೂರು ವಿಶ್ವವಿದ್ಯಾಲಯ. ಮೈಸೂರು. ಪು. ಸಂ. 86
10. ಮಮತ ಎಚ್. ಆರ್. (2021). ಕಾದಂಬರಿ ಆಧಾರಿತ ಡಾ. ರಾಜಕುಮಾರ್ ಚಲನಚಿತ್ರಗಳು. ಮೈಸೂರು ವಿಶ್ವವಿದ್ಯಾಲಯ. ಮೈಸೂರು. ಪು. ಸಂ. 120
11. ಪಾಟೀಲ ಪುಟ್ಟಪ್ಪ. (2001). ನಾಡು-ನುಡಿ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು. ಪು. ಸಂ. 274-275
12. ರಮೇಶ ಎನ್. ತೇವರಿ. (2013). ಕನ್ನಡ ನಾಡು-ನುಡಿಗೆ ಡಾ. ರಾಜಕುಮಾರ್ ಅವರ ಕೊಡುಗೆ. ರಾಣಿಚನ್ನಮ್ಮ ವಿಶ್ವವಿದ್ಯಾಲಯ. ಬೆಳಗಾವಿ.

13. ಪಾಟೀಲ ಪುಟ್ಟಪ್ಪ. (2001). ನಾಡು-ನುಡಿ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು. ಪು. ಸಂ. 275-276

## ಪರಾಮರ್ಶನ ಗ್ರಂಥಗಳು:


1. ರಮೇಶ ಎನ್. ತೇವರಿ. (2013). ಕನ್ನಡ ನಾಡು-ನುಡಿಗೆ ಡಾ. ರಾಜಕುಮಾರ್ ಅವರ ಕೊಡುಗೆ. ರಾಣಿಚನ್ನಮ್ಮ ವಿಶ್ವವಿದ್ಯಾಲಯ. ಬೆಳಗಾವಿ.
2. ಮಮತ ಎಚ್. ಆರ್. (2021). ಕಾದಂಬರಿ ಆಧಾರಿತ ಡಾ. ರಾಜಕುಮಾರ್ ಚಲನಚಿತ್ರಗಳು. ಮೈಸೂರು ವಿಶ್ವವಿದ್ಯಾಲಯ. ಮೈಸೂರು.
3. ಪೂಜಾರ ವಿ. ಜಿ. (1982). ಶಬ್ದಮಣಿದರ್ಪಣ ಸಂಗ್ರಹ. ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ. ಗುಲಬರ್ಗಾ.
4. ಬರಗೂರು ರಾಮಚಂದ್ರಪ್ಪ. (2018). ಜನಪದ ನಾಯಕ ರಾಜಕುಮಾರ. ಜನ ಪ್ರಕಾಶನ. ಬೆಂಗಳೂರು.
5. ಪಾಟೀಲ ಪುಟ್ಟಪ್ಪ. (2001). ನಾಡು-ನುಡಿ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.